International Journal of Kannada Research
www.kannadajournal.com

**ISSN: 2454–5813**
IJKR 2019; 5(4): 06-08
© 2019 IJKR
www.kannadajournal.com
Received: 07-08-2019
Accepted: 09-09-2019

**ಹೆಚ್.ಎಂ.ಶುಭ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

**Corresponding Author:**
**ಹೆಚ್.ಎಂ.ಶುಭ**
ಸಂಶೋಧನಾ ವಿದ್ಯಾರ್ಥಿನಿ, ಕನ್ನಡ ವಿಶ್ವವಿದ್ಯಾಲಯ, ಹಂಪಿ

# ಸಾಂಸ್ಕೃತಿಕ ನೆಲೆಯಲ್ಲಿ – 'ಕುಂದಾ' ಒಂದು ಸ್ಥಳನಾಮ

**ಹೆಚ್.ಎಂ.ಶುಭ**

ಕ್ರಿ.ಶ. 1681, 1470, 1702, 1666 ರಲ್ಲಿ ಶಾಸನದ ಸಂಖ್ಯೆ 100, 127, 193, 210 ರಲ್ಲಿ ಕುಂದ, ಕುಂದುಗುಳ್ಳ, ಕವದವಳ್ಳಿ, ಕಉದವಳ ಕುಂದೆಕೊಪ್ಪ ರೂಪಗಳಲ್ಲಿ ಉಕ್ತವಾಗಿದೆ. ಕುಂದಾ.

ಶಿವಮೊಗ್ಗ ಜಿಲ್ಲೆ ತೀರ್ಥಹಳ್ಳಿ ತಾಲ್ಲೂಕು ಕೇಂದ್ರದಿಂದ 20 ಕಿ.ಮೀ ಅಂತರದಲ್ಲಿರುವ ಊರು, ಕುಂದಾ, ಊರಿನ ಹೆಸರು ಹೇಗೆ ಬಂತು ? ಎಂಬ ಪ್ರಶ್ನೆಗೆ ವಕ್ತ್ಯ ಹೇಳಿದ್ದು ಹೀಗೆ–ಈಗಿನ ಆಂಧ್ರಪ್ರದೇಶದ ಅನಂತಪುರ ಜಿಲ್ಲೆ ಗುತ್ತಿ ತಾಲ್ಲೂಕಿನ ಪೊನ್ನೂರು ಮಲೆ ಬಳಿಯಕೊನೆಗೊಂಡ್ಲು ಎಂಬುದೊಂದು ಊರು, ಇದು ಅಚ್ಚಕನ್ನಡ ಪದ ಹಾಗೂ ಪ್ರದೇಶ ಅಚ್ಚ ಕನ್ನಡದಲ್ಲಿ ಕೊಂಡ ಕುಂದೆ ಎನ್ನುತ್ತಿದ್ದರು. ಶಿಲಾಶಾಸನದ ಪ್ರಕಾರ ಪ್ರಖ್ಯಾತ ಪದ್ಮನಂದಿ ಭಟ್ಟಾರಕ ಅಚಾರ್ಯಕರ ಜನ್ಮ ಸ್ಥಳವಿದು ಊರಿನ ಹೆಸರೇ ಆಚಾರ್ಯರಿಗೂ ಒಗ್ಗಿಕೊಂಡಿತ್ತು. ಕೊಂಡ ಕುಂದರ ಜನನ ಕಿ.ಪೂ 108 ರಲ್ಲಿ ಆಯಿತು. ಕೊಂಡ ಕುಂದರು ತಮ್ಮ ಹನ್ನೊಂದನೇ ವಯಸ್ಸಿನಲ್ಲೇ ಮುನಿದೀಕ್ಷೆ ಪಡೆದು, ಬಾಲಬ್ರಹ್ಮಚಾರಿಯಾಗಿ ಮನೆಯಿಂದ ಹೊರಟರು. ವಿದೇಹ ಕ್ಷೇತ್ರದ ಸೀಮಂಧರ ಸ್ವಾಮಿಯ ಸಮವಸರಣದಲ್ಲಿ ಎಂಟು ದಿನಗಳು ತಪಸ್ಸಿನ ಶಕ್ತಿಯಿಂದ ತನ್ನಲ್ಲಿನ ಅನುಮಾನಗಳನ್ನು ಪರಿಹರಿಸಿಕೊಂಡು ಚಾರಣವಿಹಾರಿಯಾಗಿ ಸಂಚರಿಸುತ್ತಾ ಹೊರಟರು. ಬರುಬರುತ್ತಾ ಭಾರತದ ಅತ್ಯುತ್ತಮ ಹವಾಮಾನದ ಪಶ್ಚಿಮಘಟ್ಟದ ದಟ್ಟಡವಿಯ ನಿರ್ಲಿಪ್ತ ಪ್ರಶಾಂತತೆ, ಗಿರಿಶಿಖರಗಳ ಸಮೂಹ ಶಿಖರದ ತುತ್ತತುದಿಯ ರಮಣೀಯ ದೃಶಾವಳಿ ಎಲ್ಲಿಯೂ ಹೋಗ ಬಿಡದೆ ತನ್ನಲ್ಲಿರಿಸಿಕೊಂಡಿತು. ಆಗಾಗಿ ಕೊಂಡಕುಂದರು ಶ್ಯಬ್ಧದ ಪರಿಸರದಲ್ಲಿ ಬಂಡೆಯ ಮೇಲೆ ಕುಳಿತು ಸಮಯಸಾರ, ನಿಯಮಸಾರ, ಪ್ರವಚನಸಾರ, ಪಂಚಾಸ್ತಿಕಾಯ, ರಯಣಸಾರ, ದಶಭಕ್ತಿ, ಅಷ್ಟಸಾರ, ಬಾರಸ ಅಣುವೆಕ್ಖ ಇತರೆ 82 ಬೃಹತ್‌ಗ್ರಂಥ ರಚನೆ ಮಾಡಿದರು, ಹಿಂದೂಗಳಿಗೆ ಭಗವದ್ಗೀತೆಯಷ್ಟು ಪ್ರಾಮುಖ್ಯತೆ ಸಮಯಸಾರ, ಪ್ರವಚನಸಾರ, ಪಂಚಾಸ್ತಿಕಾಯಗ್ರಂಥಗಳಿಗೂ ಅಷ್ಟೇ ಪಾವಿತ್ರವಂತೆ ಜೈನರಿಗೆ, ಹೀಗೆ ಪ್ರಸಿದ್ದರೂ, ಜನಾನುರಾಗಿಯೂ 33 ವರ್ಷ ಒಂದೇ ಪದವಿಯಲ್ಲಿದ್ದು ಜ್ಞಾನ ಚಾರಿತ್ರ್ಯ ಸಾಧನೆಗೈದರು.

ಚತುಸಂಘವುಕೊಂಡಕುಂದರನ್ನು 44 ನೇ ವಯಸ್ಸಿನಲ್ಲಿ ಆಚಾರ್ಯಪದವಿಗೇರಿಸಿತು 52 ವರ್ಷಗಳ ಕಾಲ ಆಚಾರ್ಯ ಪದವಿಯಲ್ಲಿದ್ದು, ಪ್ರಪಂಚ ಪರ್ಯಟನೆ, ಧರ್ಮಭೋಧನೆ, ಪ್ರಚಾರ, ಸಲ್ಲೇಕನವೃತ್ತದಲ್ಲಿ ತೊಡಗಿದರು, ಧ್ಯಾನಮಗ್ನತೆಯಲ್ಲಿ ಒಂದೊಂದು ವಿದ್ಯೆ ಪ್ರಾಪ್ತವಾಗುತ್ತದೆ. ಆಗ ಆಚಾರ್ಯರ ಅನುಯಾಯಿಗಳು –"ಗುರುಗಳೇ ನಿಮಗೆ ಅಂತರ್ ಗಾಮಿ ಸಿದ್ದಿಸಮವಸರಣ ವಿದ್ಯೆ ಪ್ರಾಪ್ತವಾಗಿದೆ" ಎಂದು ಎಬ್ಬಿಸುವುದರಲಿದ್ದರಂತೆ ಇತ್ತ ನೋಡುವುದರೊಳಗಾಗಿ ಆಚಾರ್ಯರು ಆಕಾಶಗಾಮಿಯಾಗಿ ಮಾಯವಾಗಿದ್ದರಂತೆ. ಅಂದರೆ– ಅಂತಿಮಶೃತಕೇವಲಿ (ದೈವಕ್ಷೇತ್ರ) ಗಳಾದರು. 'ಮಂಗಲಂ ಭಗವಾನ್ ವಿಭೋ ಮಂಗಲಂ ಗೌತಮ್ ಗಣೇ, ಮಂಗಲಂ ಕುಂದು ಕುಂದಾದ್ಯೋ ಜೈನಧರ್ಮೋಸ್ತ ಮಂಗಲಂ' – ಅಂದರೆ– ಜೈನಧರ್ಮದಲ್ಲಿ ಮಾನವರ ಜನ್ಮ ಅಂತರ್‌ಗಾಮಿಸಿದ್ದಿ ಸಮವಸರಣ ಎಂದು.

ಇಂತಹ ಮಹಾತ್ಮರ ಅನುಯಾಯಿಗಳು ಚಿಕ್ಕಮಗಳೂರು, ದ.ಕನ್ನಡ, ಉತ್ತರ ಕನ್ನಡ, ಮೂಡಬಿದ್ರೆ, ಪಡುಬಿದ್ರೆ, ಕಾರ್ಕಳ, ವೇಣೂರು, ಶ್ರವಣಬೆಳಗೊಳ ಇತರೆ ಕಡೆ ಬೀಡುಬಿಟ್ಟಿರುವುದನ್ನು ಈಗಲೂ ಕಾಣಬಹುದು.

ಹೀಗೆ ಕೊಂಡಕುಂದ ಆಚಾರ್ಯರ ತಪೋಭೂಮಿ, ಕುಂದನ್‌ಬೆಟ್ಟ ಎಂದು ಹೆಸರು ಪಡೆದದ್ದೂ ಉಂಟು. ಈ ಹೆಸರೇ ಬೆಟ್ಟಕ್ಕೂ ಅಂಟಿರುವುದನ್ನು ಕಾಣುತ್ತೇವೆ. ಹೀಗಾಗಿ ಕೊಂಡಕುಂದ> ಕೊಂದಕುಂದ>ಕುಂದಕುಂದ> ಕುಂದಾ>ಕುಂದಾದ್ರಿ. ಆಗಿದೆ ಎನ್ನುತ್ತಾರೆ ವಕ್ತ್ಯ

ಇನ್ನೊಂದು ಅರ್ಥದಲ್ಲಿ ಕುಂದಣಗಾರ, ಅಕ್ಕಸಾಲಿ, ಒಡವೆ ತಯಾರಕ, ಕುಂದಣ ಎಂದರೆ–ಚಿನ್ನದಲ್ಲಿ ಹರಳು ಕೂಡಿಸುವವ ಎಂಬರ್ಥಉಂಟು. ಹಿಂದೆ ವಿಜಯನಗರದ ಅಧೀನರಾದ ಕೆಳದಿ ಪಾಳೇಯಗಾರ ಆಳ್ವಿಕೆಗೊಳಪಟ್ಟ ಭೂಮಿ ಇದಾಗಿತ್ತು. ಅರಸ – ಅರಸಿಯರಿಗೆ ಆಭರಣಗಳನ್ನು ಸಿದ್ಧಪಡಿಸುವವರ ದಂಡೇ ಇತ್ತು. ಈಗಲು ಅಕ್ಕಸಾಲಿಗರ ಮನೆಗಳಿದ್ದು ಪುರಾವೆಯನ್ನು ಒದಗಿಸುತ್ತವೆ. ಆದುದರಿಂದ ಕುಂದಣ+ಕಾರ+ರ+ಕೇರಿ= ಕುಂದಣಕಾರ ರಕೇರಿ> ಕುಂದಣಕಾರಕೇರಿ> ಕುಂದಣಗಾರಕೇರಿ> ಕುಂದಣಗಾರ> ಕುಂದಣ>ಕುಂದನ>ಕುಂದ> ಕುಂದಾ ಆಗಿರಬಹುದು. ಇದು ವೃತ್ತಿವಾಚಕದಂತೆ ಧ್ವನಿಸಿದೆ.

'ಕುಂದ' ಎಂದರೆ ಬೆಟ್ಟ ಅದ್ರಿ ಎಂದರೆ –ಬೆಟ್ಟ ಭೌಗೋಳಿಕವಾಗಿ ನೋಡಲು ಸುತ್ತಲೂ ಬೆಟ್ಟಗುಡ್ಡಗಳ ಸಾಲು, ಬೆಟ್ಟಗಳ ತಪ್ಪಲು ಮರಗಿಡಗಳಿಂದ ಕೂಡಿದಂತಿದ್ದರೆ ಮೇಲಕ್ಕೇರಿದಂತೆ ಶೀಲಾವೃತ, ಗೋಪುರದಂತೆ ಕಾಣುವ ನಯನ ಮನೋಹರ ದೃಶ್ಯ ಮೇಲೆ ನಿಂತಾಗ ಸುತ್ತಲೂ ಕಾಣುವ ಗುಡ್ಡಬೆಟ್ಟ ವನರಮ್ಯತೆಯ ಮಧ್ಯೆ ಸೌರವ್ಯೂಹದ ಶುಕ್ರ ನಕ್ಷತ್ರದಂತೆ ಮಿಣುಕುವ ಊರುಗಳ ಮನೆಗಳು, ಹೀಗಾಗಿ ಬೆಟ್ಟಗಳ ಸಮೂಹದಲ್ಲಿರುವ ಮಾನವನೆಲೆ ಎಂಬಂತೆ ಗೋಚರಿಸುತ್ತದೆ.

ಕುಂದ+ದ+ಅದ್ರಿ=ಕುಂದದ ಅದ್ರಿ> ಕುಂದದಾದ್ರಿ> ಕುಂದಾದ್ರಿ >ಕುಂದಾ. ಕುಂದಾದಿಂದ ಕುಂದಾದ್ರಿಯೋ ಕಂದಾದ್ರಿಯಿಂದ ಕುಂದವೋ ಎಂಬ ಪ್ರಶ್ನೆಗೆ ಕುಂದಾದ್ರಿಯಿಂದಲೇ ಕುಂದಾಂದ್ರಿ ಬಂದಿದೆ ಎನ್ನುತ್ತಾರೆ. ಹಾಗೂ ಮೇಲಿನ ಸಾಕ್ಷ್ಯದೊಂದಿಗೆ ವಿವರಿಸುತ್ತಾರೆ.

ಇಲ್ಲಿನ ವಿಶೇಷ 165 ಅಡಿ ಆಳ ಭೂಮಿ ತೋಡಿದರೂ ಜಲಸೃಷ್ಠಿಯಾಗುತ್ತದೆ. ಬೆಟ್ಟದ ತಪ್ಪಲಿನ ಎಲ್ಲಾ ಕೆರೆ–ಹಳ್ಳ–ಕೊಳ್ಳ–ಸರೋವರಗಳೂ ವರ್ಷಪೂರ್ಣ ಜಲಾವೃತ್ತವಾಗಿರುತ್ತವೆ. ಬೆಟ್ಟದ ಮೇಲೆ ಬಂಡೆಕೊರೆದು ಕೊಂಡಗಳು ನಿರ್ಮಾಣವಾಗಿವೆ. ಸದಾಕಾಲ ಪಚ್ಚೆ ಬಣ್ಣದ ನೀಲದಿಂದ ಕೂಡಿರುವ ನಾಗಕೊಂಡ ಬಿಳಿತಾವರೆ ಹೂಗಳಿಂದ ಅಲಂಕೃತವಾಗಿರುವ ತಾವರೆಕೊಂಡ. ಇವೆಲ್ಲಾ ಜಲಕೊಂಡಗಳು ಪಾಪವಿಮೋಚನೆ ಕೊಂಡಗಳೆಂದು ಹೆಸರಾಗಿವೆ. ಕೊಳದಲ್ಲಿ ಏಕಾಗ್ರಚಿತ್ತ ಭಕ್ತಿಯಿಂದ ನಿಂಬೆಹಣ್ಣನ್ನು ಹಾಕಿದರೆ ಮುಳುಗಿ ಹುಂಚದ ಮುತ್ತಿನ ಕರೆಯಲ್ಲಿ ಮೇಲೇಳುತ್ತಂತೆ. ಭಕ್ತಿಯಿಂದ ಹಾಕಿದ್ರೆ ಮುಳುಗುತ್ತೆ. ದ್ವಂದ್ವಮನಸ್ಸಿನಿಂದ ಹಾಕಿದ್ರೆ ತೇಲುತ್ತೆ ಆಗಾಗಿ ಕಲಿಯುಗದಲ್ಲೂ ಕಾರ್ಣಿಕ ಪಾವಿತ್ರ್ಯತೆಯನ್ನು ಸಾಭೀತು ಪಡಿಸುತ್ತದೆ. ಕೊಂಡ+ಗಳ+ಅದ್ರಿ= ಕೊಂಡಗಳ ಅದ್ರಿ> ಕೊಂಡ ಅದ್ರಿ> ಕೊಂಡಾದ್ರಿ>ಕೂಂದಾದ್ರಿ> ಕುಂದಾದ್ರಿ> ಕುಂದಾ ಆಗಿದೆ.

ಇಲ್ಲಿ ಬ್ರಾಹ್ಮಣಗೌಡ, ಕೊಂಕಣಿ, ಶೆಟ್ಟರು, ಪೂಜಾರ್ರು, ಈಡಿಗ, ಉಪ್ಪಾರ, ಮಗೇರ್ರು, ಲಿಂಗಾಯ್ತರ ಒಂದು ಮನೆ ಬಿಟ್ಟರೆ ವಲಸೆ ಬಂದ ಜನಾಂಗಗಳೇ ಅಧಿಕವಾಗಿವೆ. ಇದು ಹೊನ್ನೆತಾಳು ಗ್ರಾಮ ಪಂಚಾಯ್ತಿ ಆಗುಂಬೆ ಹೋಬಳಿಯ ಉಪಗ್ರಾಮ ಕುಂದ ಕುಂದಾದ್ರಿಯು ಹೊಸಪೇಟೆ, ಹಾಲ್ಕುಂದ, ಚೆಂಗಾರು, ನಾಲೂರು ಮಾಸ್ತಿಕಟ್ಟೆ, ಕೋಣಾಪುರ, ತೈಲಾಪುರ, ಅಂಗಡಿ, ನೆಂಟೂರುಗಳ ಮಧ್ಯೆ ಇದೆ. ಈ ಊರುಗಳ ಕಾಲು, ಅರ್ಧ, ಮುಕ್ಕಾಲು ಪ್ರದೇಶ ಕುಂದಾದ್ರಿಗೆ ಸೇರಿವೆ. ಅಲ್ಲದೇ ಈ ಊರುಗಳನ್ನು ಉಂಬಳಿಯಾಗಿ ಬಿಟ್ಟಿದ್ದರು. ಆಗಾಗಿ ಇಲ್ಲಿನ ಜನರು ಎಲ್ಲಾ ಪೂಜಾಕೈಂಕರ್ಯಗಳಲ್ಲೂ ಪಾಲ್ಗೊಳ್ಳುತ್ತಾರೆ.

'ಕುಂದಾ'ದಲ್ಲಿ ಈಶ್ವರ, ಮಹಾಲಿಂಗೇಶ್ವರ, ಚೌಡಮ್ಮನ ದೇಗುಲಗಳಿದ್ದರೂ ಪಾರ್ಶ್ವನಾಥರ ಬಸದಿಯೇ ಪ್ರಸಿದ್ಧಿ ಪಡೆದಿದೆ. ಪ್ರತಿವರ್ಷ ಮಕರ ಸಂಕ್ರಾಂತಿಯಂದು ವಿಜೃಂಭಣೆಯಿಂದ ಜಾತ್ರೆ ನಡೆಯುತ್ತದೆ. ಸರ್ವಧರ್ಮಿಯರೂ ಆಗಮಿಸುವರು ಹಿಂದಿನ ರಾತ್ರಿ ಹೋಮ, ಹವನ, ಇರುತ್ತದೆ. ದೇವರ ಅಭಿಷೇಕಕ್ಕೆ ಹಾಲ್ಕುದದಿಂದ –ಹಾಲನ್ನು, ವಾರಳ್ಳಿಯಿಂದ ವಿಪುಲವಾಗಿ ಬೆಳೆದ ಧವಸ ಧಾನ್ಯಗಳನ್ನು, ಕುಂದ ಹಳ್ಳಿಬೈಲು, ಹೊಸಪೇಟೆ, ಚೆಂಗಾರುನಿಂದ ಹಣ್ಣು ಹಂಪಲುಗಳನ್ನು ತರುವುದು ವಾಡಿಕೆ. ಕುಂದಾ ಊರೆ ಈ ಅದ್ರಿಗೆ ಸನಿಹದ ಎಡೆ ಆಗಿರೋದ್ರಿಂದ ಕುಂದಾದ್ರಿ ಎನ್ನುವ ಹೆಸರೆ ಮನೆಮಾತಾಗಿದೆ.

ಕುಂದಾದ್ರಿಯು ಸಮುದ್ರಮಟ್ಟದಿಂದ ಮೂರುವರೆ ಸಾವಿರ ಅಡಿ ಎತ್ತರದಲ್ಲಿದೆ. ಬೃಹತ್ತಾದ ಬಂಡೆಯ ಮೇಲೆ ಪಾರ್ಶ್ವನಾಥ ಬಸದಿ, ಮಂದಿರ ಪ್ರವೇಶದ್ವಾರದ ಮುಂದೆ ಮಾನಸ್ತಂಭವಿದೆ. ಅಷ್ಟಮೂಲೆಗಳಲ್ಲಿ ಕೆತ್ತನೆಯ ಶಿಲಾ ಸ್ತಂಭಗಳಿವೆ. ಗರ್ಭಗೃಹದಲ್ಲಿ ಖಡ್ಗಾಸನದ ನಾಲ್ಕು ಅಡಿ ಎತ್ತರವಿರುವ ಐದು ಎಡೆ ಸರ್ಪವೊಂದಿರುವ ಮೂರ್ತಿ ಇರುವುದರಿಂದ ಇದು ಪಾಶ್ವನಾಥರ ಮೂರ್ತಿಯೇ ಎಂದು ಮನದಟ್ಟಾಗುತ್ತದೆ. ಇದು ತೈಲಪನ ರಚನೆ ಎಂದು ಶಾಸನಗಳಿಂದ ತಿಳಿಯುತ್ತದೆ. ಬಸದಿಯ ಹಿಂದೆ ಕುಂದ ಕುಂದಾಚಾರ್ಯರ ಪಾದುಕೆಯನ್ನು ಮೂರು ಸುತ್ತು ಕಮಲದಳಗಳ ಮಧ್ಯೆ ಪ್ರತಿಷ್ಠಾಪಿಸಿದ್ದಾರೆ. ಇಲ್ಲಿ ನಿಂತು ಹೊರಗಡೆ ಇರುವ ಮಾನಸ್ತಂಭದ ಮೇಲಿನ ಬ್ರಹ್ಮಯಕ್ಷನ ಮೂರ್ತಿಯನ್ನು ನೋಡಬಹುದು. ಚಂದನಾಥ. ಶೀತಲನಾಥ, ಪಾರ್ಶ್ವನಾಥ ತೀರ್ಥಂಕರ ಮೂರ್ತಿಗಳು ಏಕಶಿಲೆಯಲ್ಲಿ ನಿರ್ಮಿಸಿದ್ದಾರೆ.

ಧರಣೇಂದ್ರ ಯಕ್ಷ ಪದ್ಮಾವತಿ ದೇವಿಯರ ಮೂರ್ತಿ ಪಂಚ ಲೋಹದಿಂದ ಕೂಡಿದೆ. ನೂರಾರು ವರ್ಷ ಹಳೆಯವಾದ್ದರಿಂದ ಪ್ರಾಕೃತಿಕ ವಿಕೋಪ.

ಪ್ರತಿನಿತ್ಯ ಅಭಿಷೇಕ ಕಡಿಮೆ ರಕ್ಷಣ, ಆಯುಷ್ಯ ಮುಗಿದಿದ್ದು, ವಜ್ರಲೇಪನ ಕಾರ್ಯ ಮೂರ್ತಿಗಳಿಗೆ ಮೆರುಗುತಂದಿದೆ.

ಎರಡು ಸಾವಿರದ ಐದು ನೂರರಲ್ಲಿ ಮಹಾವೀರರ ಜನನ, ಇವರ ಐದುನೂರು ವರ್ಷ ಹಿಂದಿನವರು ಪಾರ್ಶ್ವನಾಥರು ಒಬ್ಬೊಬ್ಬ ತೀರ್ಥಂಕರರಿಗೂ ಐದುನೂರು ವರ್ಷಗಳ ಅಂತರ ಒಂದು ಮಗುವಿನಿಂದ ಒಂದು ಮಗುವಿಗೆ ಇರುವ ಅಂತರದಂತೆ.

ದಟ್ಟ ಅರಣ್ಯದಿಂದ ಆಕ್ರಮಿತ ಪ್ರದೇಶವಿದು ಜೈನರ ಆಳ್ವಿಕೆಯ ನಾಡು ಇಲ್ಲಿ ತೀರ್ಥಂಕರರ ಬಸದಿಯಲ್ಲಿ ರಕ್ಷಕಳಾಗಿ ಪದ್ಮಾವತಿ–ಬ್ರಹ್ಮಯಕ್ಷ ಮೂರ್ತಿಗಳೂ ಇವೆ. ಪದ್ಮಾವತಿ ಮಲೆನಾಡಿನ ವಿವಿಧ ಭಾಗಗಳಲ್ಲಿ ಪೂಷ್ಮಾಣಿ ದೇವಿಯಾಗಿಯೂ, ಜಾಲಾಮಾಲಿನಿಯಾಗಿಯೂ, ಚಕ್ರೇಶ್ವರಿಯಾಗಿಯೂ. ಸಿದ್ಧಾಯಿನಿಯಾಗಿಯೂ ಅವತಾರವೆತ್ತಿ ಮಲೆನಾಡ ಒಡತಿ ಹಾಗೂ ರಕ್ಷಕಿಯಾಗಿದ್ದಾಳೆ. ಜೈನರು ಆಳ್ವಿಕೆ ನಡೆಸಿದ ಕವಲೆದುರ್ಗ, ಆನಂದಪುರ, ಆರಗ, ಕೆಳದಿ, ಮುಂತಾದ ಸ್ಥಳಗಳಲ್ಲೂ ದೇವಿಯನ್ನು ಪ್ರತಿಷ್ಠಾಪಿಸಿ ಪೂಜಿಸುವ ವಾಡಿಕೆಯಿದೆ.

"ಜೀವನದಲ್ಲಿ ಏನೂ ಇಲ್ಲ ಹುಟ್ಟುವಾಗ ಬೆತ್ತಲೆ ಸಾಯುವಾಗ ಬೆತ್ತಲೆ ನಡುವೆ ಮೂರು ದಿನ ಕತ್ತಲೆ " ಎಂಬ ವಾಣಿ 24 ತೀರ್ಥಂಕರರಲ್ಲಿ 21 ತೀರ್ಥಂಕರರು ರಾಜ ವೈಭೋಗದಿಂದ ಮೆರೆದರೂ ಜೈನದೀಕ್ಷೆ ಪಡೆದು ಸಲ್ಲೇಕನವ್ರತ್ತದಂತಹ ಕಠಿಣ ಕ್ರಿಯೆಯಲ್ಲಿ ಭಾಗಿಯಾಗಿ ಜೀವನವನ್ನು ಪರಿತ್ಯಾಗ ಮಾಡಿರುವವರನ್ನು ಕಾಣುತ್ತೇವೆ. ಆಗಾಗಿ ಕುಂದ ಕುಂದಾಚಾರ್ಯರ ಹೆಸರು ಅಜರಾಮರವಾಗಲೆಂಬಂತೆ ತಾವು ಪಾದ ಸ್ಪರ್ಶಿಸಿದ ನೆಲೆಗೂ ಕುಂದಾ ಎಂದೂ ಸನಿಹದ ಗುಡ್ಡಗಳ ತಪ್ಪಲಿನ ಎಡೆ ಆದ್ರಿ ಎಂದೂ ಒಟ್ಟಾಗಿ ಕುಂದಾದ್ರಿ ಎಂದೇ ಪ್ರಖ್ಯಾತಿ ಪಡೆದಿದೆ. ಕನ್ನಡಕ್ಕೆ ಹನ್ನೆರಡು ಅರ್ಥ ಎಂಬಂತೆ ತಮ್ಮ ಮನದಾಳದ ಸಂತಿಗಳನ್ನು ವ್ಯಕ್ತ ಬಿತ್ತರಿಸಿದರು.

'ಶಿವನಗದ್ದೆ' ಎಂಬುದೊಂದು ಊರು, ಹೆಸರು ಬಂದದು ಏಕೆ ? ಅಂದಿದ್ದಕ್ಕೆ ವಕ್ತೃ ಹೇಳಿದ್ದು ಇಷ್ಟೆ, ವಿವೇಕಾಭ್ಯುದಯದಲ್ಲಿ ಒಂದು ಮಾತು, ಹಸುವಿನ ಕರು ಹುಲಿಯ ಮೊಲೆಯ ಹಾಲನ್ನು ಹುಲಿಯ

ಮರಿ ಹಸುವಿನ ಮೊಲೆಯ ಹಾಲನ್ನು ಕುಡಿಯುತ್ತಿತ್ತಂತೆ ಇದು ಸ್ವರ್ಗೀಯ ಮನಸ್ಸನ್ನು ಪ್ರಾಣಿಗಳಲ್ಲೂ ನಿರ್ಮಿಸಿತ್ತು. ಅಂತಹ ನಿಸರ್ಗ ಇಲ್ಲಿತ್ತು. ಆಗಾಗಿ 'ಶಿವನಗದ್ದೆ' ಆಯ್ತು. ಅಂದು ಅತೀ ಬಾಂದವ್ಯ ಅಹಿಂಸಾಮಾರ್ಗ ಜೈನಧರ್ಮಿಯರಲ್ಲಿ ಇತ್ತು. ಕಠಿಣವೃತ್ತಿಗಳಾಗಿದ್ದರು. ಅನುಸರಣಿ ಕಷ್ಟಕರವಾದ ಪ್ರಸಂಗದಲ್ಲಿ ಜೈನಧರ್ಮದಿಂದ ಅನ್ಯೂಧರ್ಮಕ್ಕೆ ಫಲಾಯನ ಮಾಡಿರುವುದೂ ಉಂಟು.

ತಲ್ಲೂರು-ಗುತ್ಯಮ್ಮ ಮಾಹಾತಂಗ್ಯಮ್ಮ ಅಕ್ಕತಂಗಿ ದೇವತೆಗಳು,ಇವರನ್ನು ಪೂಷ್ಮಾಂಡಿನಿ ದೇವಿ ಎಂದೇ ಭಾವಿಸುತ್ತಿದ್ದರು. ಚಂದ್ರನಾಥ ತೀರ್ಥಂಕರ ಜೀನಮಂದಿರವಿತ್ತು ಆದರೆ ಈಗ ಪಾಳು ಬಿದ್ದ ಬಸ್ತಿಯಾಗಿದೆ. ಮಲೆನಾಡು ಶೇಕಡಾ 90 ರಷ್ಟು ಭಾಗ ಜೈನರ ಆಡಳಿತ ಪ್ರದೇಶ. ಹೊಯ್ಸಳರ 'ವಿಷ್ಣುವರ್ಧನ ಜೈನಧರ್ಮದಿಂದ ವೈಷ್ಣವಧರ್ಮ ಅನುಸರಿಸಿರುವುದನ್ನು ಕಾಣುತ್ತೇವೆ. ರಾಮಾನುಜಾಚಾರ್ಯರ ಕಾಲದಲ್ಲಿದ್ದ ಈ ಪ್ರದೇಶದ 700 ಬಸದಿಗಳು ದೇವಾಲಯಗಳಾಗಿ ಪರಿವರ್ತನೆಗೊಂಡವು ಮೊಗಲರ ಘಜ್ನಿಮಹಮದನ ಕಾಲದಲ್ಲಿ ಜೈನರು ಮುಸ್ಲಿಂ ಪ್ರಭಾವಕ್ಕೆ ಒಳಗಾದರು ಮಂದಿರಗಳು ಮಸೀದಿಗಳಾದವು. ಆದರೂ ಇಂದು ಅಲ್ಪಸ್ವಲ್ಪ ಜೈನಪರಂಪರೆ ಉಳಿದು ಬೆಳೆದುಕೊಂಡು ಬಂದಿದೆ ಎಂಬುದಕ್ಕೆ ಸಾಕ್ಷಿ ಕುಂದಾ.

ಇಂದೂ ಪ್ರತಿವರ್ಷ ಜನವರಿ 14 ಮಕರ ಸಂಕ್ರಾಂತಿಯಂದು ನಡೆಯುವ ಜಾತ್ರೆಗೆ ದಕ್ಷಿಣ – ಉತ್ತರಭಾರತದ ಜೈನ ಕ್ಷೇತ್ರಗಳಿಂದ ತೀರ್ಥಂಕರರು ಬಂದು ಕಾಡಿನೊಳಗೆ ತಪಸ್ಸಿಗೆ ಕುಳಿತುಕೊಳ್ಳುತ್ತಾರೆ. ಇಂತಹ ಸಂದರ್ಭ ಅನೇಕ ಜಾತಿಯ ಹಾವುಗಳು ತಪಸ್ವಿಗಳ ಸನಿಹದಲ್ಲೇ ಸುಳಿದರೂ ತಪಸ್ವಿಗಳು ಕೂತ ಸ್ಥಳದಿಂದ ವಿಚಲಿತರಾಗದೇ ತಪಸ್ಸಿನಲ್ಲಿ ತಲ್ಲೀನರಾಗಿರುತ್ತಾರೆ.

ಕುಂದಾದ್ರಿಗೆ ಮಕರಸಂಕ್ರಾಂತಿಯಂದು ಮುಂಜಾನೆ ಐದು ಗಂಟೆಯಲ್ಲಿ ಉಂಟಾಗುವ ಮೋಡದ ಚಲನೆ ಪ್ರವಾಸಿಗರನ್ನು ಚಲನಚಿತ್ರದಲ್ಲಿ ಕಾಣುವ ಕನಸಿನಂತೆ ಭ್ರಮರಾಲೋಕಕ್ಕೆ ಕೊಂಡೊಯ್ದಂತೆ ಭಾಸವಾಗುತ್ತದೆ. ಹುಣಿಮೆಯ ದಿನ ಒಂದು ಕಡೆ ಸೂರ್ಯಾಸ್ತ ಮತ್ತೊಂದೆಡೆ ಚಂದ್ರೋದಯ. ದಕ್ಷಿಣ ಭಾರತದಲ್ಲಿ ಕನ್ಯಾಕುಮಾರಿಯನ್ನು ಬಿಟ್ಟರೆ ಕುಂದಾದ್ರಿಯೇ ರಮ್ಯತಾಣ ಎಂಬುದನ್ನು ಬಾಯಿ ಮಾತಿನಲ್ಲಿ ವರ್ಣಿಸಲು ಪದ ಪುಂಜಗಳೇ ಸಾಲದು.

ಈ ಸ್ಥಳವು ಪ್ರಕೃತಿವಾಚಕದಂತೆ ಭಾಸವಾದರೂ, ಮಡಿಲಲ್ಲಿ ವ್ಯಕ್ತಿವಾಚಕ, ಧಾರ್ಮಿಕವಾಚಕ, ವೃತ್ತಿವಾಚಕ, ಜನಾಂಗವಾಚಕವಾಗಿಯೂ ಗೋಚರಿಸಿ ಸಂಸ್ಕೃತಿಯ ಮೇಲೆ ಬೆಳಕು ಚೆಲ್ಲಿದೆ. ಎಲ್ಲವೂ ಸತ್ಯವಾದರೂ ಸತ್ಯಕ್ಕೆ ಅತೀ ಸನಿಹ ವ್ಯಕ್ತಿವಾಚಕವೇ ಈ ಸ್ಥಳ ನಾಮದ ಸಾಂಸ್ಕೃತಿಕ ಸಂಗತಿಯನ್ನು ವಿವೇಚಿಸುವಲ್ಲಿ ಪ್ರಸಿದ್ಧಿ ಪಡೆದಿರುವುದು ಎಂದು ಕ್ಷೇತ್ರ ಕಾರ್ಯದಿಂದ ಸಾಬೀತಾಗಿದೆ.

**ಕೃಪೆ**


1. ಎಫಿಗ್ರಾಫಿಯಾ ಕರ್ನಾಟಿಕ ಸಂ. 13–ತೀರ್ಥಹಳ್ಳಿ ತಾಲ್ಲೂಕು.
2. ಕನ್ನಡ ಸಾಹಿತ್ಯ ಪರಿಷತ್ ನಿಗಂಟು –ಸಂ. 2 ಪು.ಸಂ. 1884–1885
3. ನಿರೂಪಕರು: * ಜೀವಂದರ್ ಜೈನ್–64 ವರ್ಷ– ಆಯುರ್ವೇದ ವೈದರು–ತೀರ್ಥಹಳ್ಳಿ.
   * ಶಾಂತಿನಾಥ ಜೈನ್, –43 ವರ್ಷ– ಅರ್ಚಕರು– ಕುಂದ.